## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 794 |
| ಸದಸ್ಯರ ಹೆಸರು | : | ಶ್ರೀ ನಿರಾಣಿ ಹನಮಂತ ರುದ್ರಪ್ಪ,<br>(ವಿಧಾನ ಪರಿಷತ್‌ನಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 21-02-2024 |
| ಉತ್ತರಿಸುವ ಸಚಿವರು | : | ಲೋಕೋಪಯೋಗಿ ಸಚಿವರು |

| ಕ್ರ.ಸ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ರಾಷ್ಟ್ರೀಯ ಹೆದ್ದಾರಿ (ನ್ಯಾಷನಲ್ ಹೈವೇ) ಮೇಲೆ ಕಟ್ಟಡ ನಿರ್ಮಿಸಲು ಇರುವ ನಿಯಮಾವಳಿಗಳೇನು; (ವಿವರ ನೀಡುವುದು) | ರಾಷ್ಟ್ರೀಯ ಹೆದ್ದಾರಿಗಳಲ್ಲಿ ಕಟ್ಟಡ ನಿಯಂತ್ರಣ ರೇಖೆಯನ್ನು IRC 73-1980 (ಕಂಡಿಕೆ 6.1.5) ಕೇಂದ್ರ ಭೂಸಾರಿಗೆ ಮತ್ತು ಹೆದ್ದಾರಿಗಳ ಮಂತ್ರಾಲಯದ ಸುತ್ತೋಲೆ ಸಂಖ್ಯೆ: NH.111/P/72/76 ದಿನಾಂಕ: 13.01.1977, ರಾಜ್ಯ ಸರ್ಕಾರದ ಸುತ್ತೋಲೆ ಸಂಖ್ಯೆ:ಲೋಇ 466 ಸಿಆರ್‌ಎಮ್ 2022, ದಿನಾಂಕ:30.06.2022 ರನ್ವಯ ಓಪನ್ ಏರಿಯಾದಲ್ಲಿ ಹೆದ್ದಾರಿಯ ಮಧ್ಯಭಾಗದಿಂದ 40.00 ಮೀಟರ್ ಅಂತರದಲ್ಲಿ ಹಾಗೂ ಬಿಲ್ಟ್-ಅಪ್ ಏರಿಯಾದಲ್ಲಿ ಹೆದ್ದಾರಿ ಗಡಿಭಾಗದಿಂದ 3.00 ರಿಂದ 6.00 ಮೀಟರ್ ಕಟ್ಟಡದ ಅಂತರ ನಿಗಧಿಪಡಿಸಲಾಗುತ್ತದೆ. ಅಲ್ಲದೇ, ಕೇಂದ್ರ ಭೂಸಾರಿಗೆ ಮತ್ತು ಹೆದ್ದಾರಿಗಳ ಮಂತ್ರಾಲಯ ಹಾಗೂ ರಾಜ್ಯ ಸರ್ಕಾರದಿಂದ ಕಾಲಕಾಲಕ್ಕೆ ಹೊರಡಿಸುವ ಸುತ್ತೋಲೆ / ಮಾರ್ಗಸೂಚಿಗಳನ್ನು ಪರಿಗಣಿಸಿ ಕಟ್ಟಡದ ಅಂತರದ ಗಡಿ ರೇಖೆಯನ್ನು ನಿಗಧಿಪಡಿಸಲಾಗುವುದು. |
| ಆ) | ರಾಷ್ಟ್ರೀಯ ಹೆದ್ದಾರಿ ಪಕ್ಕದಲ್ಲಿ ಕಟ್ಟಡ ನಿರ್ಮಾಣ ಮಾಡಲು ರಸ್ತೆಯ ಮಧ್ಯ ಭಾಗದಿಂದ ಎಷ್ಟು ಅಂತರದಿಂದ ಕಟ್ಟಡ ಕಟ್ಟಲು ಅಂತರ ಬಿಡಬೇಕು; (ಮಾಹಿತಿ ನೀಡುವುದು) | |
| ಇ) | ರಾಷ್ಟ್ರೀಯ ಹೆದ್ದಾರಿ ಪಕ್ಕದಲ್ಲಿ ಕಟ್ಟಡ ನಿರ್ಮಿಸಲು ಮಾನ್ಯ ಉಚ್ಚ ನ್ಯಾಯಾಲಯ / ಸರ್ವೋಚ್ಚ ನ್ಯಾಯಾಲಯ ಯಾವುದಾದರೂ ನಿರ್ದೇಶನವನ್ನು (ಅನುಸರಿಸಬೇಕಾದ) ಪ್ರಾಧಿಕಾರಕ್ಕೆ / ಸರ್ಕಾರಕ್ಕೆ ನೀಡಿದೆಯೇ; ನೀಡಿದ್ದಲ್ಲಿ, ಅದರ ಸಂಪೂರ್ಣ ಮಾಹಿತಿ ನೀಡುವುದು ? | ರಾಷ್ಟ್ರೀಯ ಹೆದ್ದಾರಿ ವಲಯಕ್ಕೆ ಸಂಬಂಧಿಸಿದಂತೆ, ಹೆದ್ದಾರಿಗಳ ಪಕ್ಕದಲ್ಲಿ ಕಟ್ಟಡಗಳನ್ನು ನಿರ್ಮಿಸಲು ಮಾನ್ಯ ಉಚ್ಚ ನ್ಯಾಯಾಲಯದಿಂದ ಯಾವುದೇ ನಿರ್ದೇಶನ ನೀಡಿರುವುದಿಲ್ಲ. |

ಕಡತ ಸಂಖ್ಯೆ: ಲೋಇ 49 ಸಿಎನ್‌ಹೆಚ್ 2024 (ಇ)

(ಸತೀಶ ಜಾರಕಿಹೊಳಿ)
ಲೋಕೋಪಯೋಗಿ ಸಚಿವರು